ಕೊಡಬೇಕಾಗುತ್ತದೆಂದು ಹೇಳುತ್ತಿದ್ದೇನೆ. ನಾನು ಈಗಲೇ ಅವರೊಟ್ಟಿಗೆ ವ್ಯವಹಾರ ಮಾಡುತ್ತೇನೆ. ಆದೇಶ ಕೊಡಲಿಕ್ಕೆ ಬರುವುದಾದರೆ ಆದೇಶವನ್ನು ಕೊಡುತ್ತೇನೆ.

ಯಾದಗಿರಿ ಪಟ್ಟಣದಲ್ಲಿ ಕುಡಿಯುವ ನೀರಿನ ಕೊರತೆ

1501. ಶ್ರೀ ಡಾ: ಎ.ಬಿ. ಮಲಕರೆಡ್ಡಿ (ಯಾದಗಿರಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಸ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಯಾದಗಿರಿ ಪಟ್ಟಣಕ್ಕೆ ಕುಡಿಯುವ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಪ್ರಗತಿಯಲ್ಲಿರುವ ಕುಡಿಯುವ ನೀರಿನ ಯೋಜನೆಯನ್ನು ಯಾವಾಗ ಪೂರೈಸಲಾಗುವುದು?

3) ಬರುವ ಬೇಸಿಗೆ ಕಾಲಕ್ಕೆ ಕುಡಿಯುವ ನೀರನ್ನು ಒದಗಿಸಲು ಈ ಬಗ್ಗೆ ಸರ್ಕಾರ ಮಾಡಿರುವ ಯೋಜನೆ ಏನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

1) ಹೌದು.

2) ಮೇ 1992ರ ಅಂತ್ಯದಲ್ಲಿ ಪೂರೈಸಲಾಗುವುದು.

3) ಕೆ.ಇ.ಬಿ. ಯವರಿಂದ ವಿದ್ಯುಚ್ಛಕ್ತಿ ದೊರತಕೂಡಲೇ ಯೋಜನೆಯನ್ನು ಕಾರ್ಯಾರಂಭ ಮಾಡಲಾಗುತ್ತದೆ. ಹಾಗಿಲ್ಲದಿದ್ದಲ್ಲಿ ರೂ. 4.50 ಲಕ್ಷಗಳ ವೆಚ್ಚದಲ್ಲಿ 15 ಕೊಳವೆ ಬಾವಿಗಳನ್ನು ಕೊರೆಯಲಾಗುವುದು.

ಡಾ : ಎ.ಬಿ. ಮಲಕರೆಡ್ಡಿ : ಮಾನ್ಯ ಅಧ್ಯಕ್ಷರೇ, ಯಾದಗಿರಿ ನಗರಕ್ಕೆ ಕುಡಿಯುವ ನೀರಿನ ಸರಬರಾಜು ವಿಷಯದಲ್ಲಿ ಈಗಾಗಲೇ ನಾನು ಮೂರನೆ ಸಲ ಪ್ರಸ್ತಾಪ ಮಾಡುತ್ತಿರುವುದು. ಪ್ರತಿ ವರ್ಷ ಸರ್ಕಾರದವರು ಹೇಳುತ್ತಿದ್ದಾರೆ, ಡಿಸೆಂಬರ್ 1990ರ ಅಂತ್ಯದಲ್ಲಿ ಕೊಡುತ್ತೇವೆಂದು. ಆಮೇಲೆ 1991ರಲ್ಲಿ ನಾನು ಡಿಮ್ಯಾಂಡ್ಸ್ ಮೇಲೆ ಭಾಷಣ ಮಾಡುವಾಗ ಕೇಳಿದ್ದಕ್ಕೆ 1991ರ ಅಂತ್ಯದಲ್ಲಿ ಕೊಡುತ್ತೇವೆಂದು ಹೇಳಿದರು. ಈಗ ಎರಡು ವರ್ಷ ಮುಗಿದು ಹೋಯಿತು. ಈಗ ಉತ್ತರದಲ್ಲಿ 1992ರ ಮೇ ತಿಂಗಳಲ್ಲಿ ನೀರನ್ನು ಕೊಡುತ್ತೇವೆನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರೆ ಇಲ್ಲಿ ಒಂದು ಪ್ರಶ್ನೆ ಉದ್ಭವವಾಗುತ್ತದೆ. ಎರಡು ವರ್ಷದ ಅಂತರದಲ್ಲಿ ಈ 1992ನೇ ಮೇಗೆ ನೀರನ್ನು ಸಪ್ಲೈ ಮಾಡುತ್ತೇವೆಂದು ಹೇಳಿದರೂ ಕೂಡ ಇದು ವಾಸ್ತವಿಕವಾಗಿ ಸಾಧ್ಯವಾಗುವುದಿಲ್ಲ. ಇದಕ್ಕೆ ಕಾರಣವಾದರೂ ಇಷ್ಟೇ. ನೀರು ಸರಬರಾಜು ಭೀಮಾನದಿಯಿಂದಲಾಗತಕ್ಕಂಥದ್ದು ಇರುತ್ತದೆ. ಭೀಮಾನದಿ ಮಹಾರಾಷ್ಟ್ರದಿಂದ ಬರುತ್ತದೆ. ಈ ಎರಡು ವರ್ಷಗಳ ಅಂತರದಲ್ಲಿ ಅವರು ಯಥೇಚ್ಛವಾಗಿ ಬ್ಯಾರೇಜ್ ಕಟ್ಟಿದ್ದಾರೆ. ಅವರು ಬ್ಯಾರೇಜ್ ಕಟ್ಟಿರುವುದರಿಂದ ವಾಟರ್ ಫ್ಲೋ ಆಗುವುದಿಲ್ಲ. 1992 ಮೇ ಗೆ ನೀರು ಕೊಡುತ್ತೇವೆಂದು ಉತ್ತರದಲ್ಲಿ ಕೊಟ್ಟಿದ್ದಾರೆ. ನಾನು ಏನು ಹೇಳುತ್ತಿದ್ದೇನೆಂದರೆ ತಾವು ಕೊಡುತ್ತೇವೆಂದು ಒಪ್ಪಿಕೊಂಡರೂ ಕೂಡ ಹೊಳೆಯಲ್ಲಿ ನೀರೇ ಇರುವುದಿಲ್ಲ. ನೀರಿಲ್ಲದಿರುವಾಗ ಯಾವರೀತಿ ನೀರನ್ನು ಕೊಡುತ್ತೀರಿ ಎಂಬುದನ್ನು ಪ್ರಶ್ನೆ ಮಾಡುತ್ತಿದ್ದೇನೆ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಸಭಾಧ್ಯಕ್ಷರೇ ಈ ಪ್ರಾಜೆಕ್ಟ್ ಸಂಪೂರ್ಣವಾಗಿದೆ. ನಾವು ಎಲೆಕ್ಟ್ರಿಸಿಟಿಯವರಿಗೆ ದುಡ್ಡನ್ನು ಕೂಡ ಕಟ್ಟಿದ್ದೇವೆ. ಎನರ್ಜೈಸ್ ಮಾಡಿದಕೂಡಲೇ ನಾವು ಸ್ಟಾರ್ಟ್ ಮಾಡುತ್ತೇವೆ. ನದಿಯಲ್ಲಿ ನೀರು ಇದೆಯೋ ಇಲ್ಲವೋ ಎನ್ನುವ ಪ್ರಶ್ನೆ ಅದನ್ನು ನಾವು ನೋಡಬೇಕಾಗುತ್ತದೆ. ನದಿಯಲ್ಲಿ ನೀರೇ ಇಲ್ಲವೆಂದರೆ ಆ ಪ್ರಾಜೆಕ್ಟನ್ನು ತೆಗೆದುಕೊಳ್ಳಬಾರದಾಗಿತ್ತು. ನಾನು ಬೇಕಾದರೆ ಅದನ್ನು ತೆಗೆಸಿಬಿಡುತ್ತೇನೆ.

ಡಾ. ಎ.ಬಿ. ಮಲಕರೆಡ್ಡಿ : ಸಮಸ್ಯೆ ಉದ್ಭವವಾಗಿರುತಕ್ಕಂಥ ಬೇಸಿಗೆಯಲ್ಲಿ ಈ ವರ್ಷ ಬೇಸಿಗೆಯಲ್ಲಿ ನೀರು ಫ್ಲೋ ಇಲ್ಲ. ಕಟ್ಟಿ ಆಗಿಬಿಟ್ಟಿದೆ. ಹೋದ ವರ್ಷ ಒಂದು ಸೂಚನೆ ಕೊಟ್ಟಿದ್ದೆ. ಆದೇನೆಂದರೆ ಒಂದು ಬ್ಯಾರೇಜ್ ಕಟ್ಟಿದರೆ ಎರಡು ಫುಟ್ ಮೂರು ಫುಟ್ ನೀರು ಶೇಖರಣೆ ಮಾಡಬಹುದಾಗಿತ್ತು. ಮೇ ತಿಂಗಳಲ್ಲಿ ಎಲೆಕ್ಟ್ರಿಸಿಟಿ ತೆಗೆದುಕೊಂಡು ನೀರನ್ನು ಕೊಡಬಹುದಾಗಿತ್ತು. ಈಗ ಬೋರ್‌ವೆಲ್ ಸಲುವಾಗಿ 5-6 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ. ಇದನ್ನೆಲ್ಲಾ ನೋಡಿದರೆ ಕೇವಲ ಆಶ್ವಾಸನೆಗಳ ಸುರಿಮಳೆ ಆಗುತ್ತಿದೆಯೇ ಹೊರತು ನಮ್ಮ ಕೆಲಸಗಳು ಆಗುತ್ತಿಲ್ಲ. ಯಾದಗಿರಿ ಎತ್ತರ ಪ್ರದೇಶದಲ್ಲಿದೆ. ಅಲ್ಲಿ ಬೋರ್‌ವೆಲ್ ಹಾಕಿದರೂ ನೀರು ಸಿಗುವುದಿಲ್ಲ. The town is situated in the hill. There is no water available there. ನದಿಗೆ ಬ್ಯಾರೇಜ್ ಕಟ್ಟುವುದಾದರೆ ಕೇವಲ 3 ತಿಂಗಳಲ್ಲಿ ಕಟ್ಟಬಹುದಾಗಿತ್ತು. ಆ ಬಗ್ಗೆ ಏನಾದಾರೂ ಸೂಚನೆ ಇದೆಯೇ? ಈವರೆಗೆ ಏತಕ್ಕೆ ಕಟ್ಟಿಲ್ಲ?

ಶ್ರೀ ಕೆ.ಜೆ. ಜಾರ್ಜ್ : ಈಗ ನದಿಯಲ್ಲಿ ಬೇಕಾದಷ್ಟು ನೀರು ಇದೆ. ನೀರು ಕಡಿಮೆಯಾದರೆ ಟೆಂಪರರಿಯಾಗಿ ಮುಂದೆ ಬ್ಯಾರೇಜ್ ಕಟ್ಟತಕ್ಕ ಕೆಲಸ ಮಾಡುತ್ತೇವೆ.

ಶ್ರೀ ಕೆ. ಗಂಗಾಧರ ಗೌಡ : ಇದೇ ರೀತಿ ಸಮಸ್ಯೆ ನಮ್ಮ ರಾಜ್ಯದ ಬೇರೆ ಬೇರೆ ಕಡೆಯೂ ಇದೆ. ನಮ್ಮ ಬೆಳ್ತಂಗಡಿಯಲ್ಲಿ ಕೂಡ ಇದೇ ರೀತಿ ಸಮಸ್ಯೆ ಇದೆ. ಇಲಾಖೆಯವರು 40-50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ನೀರಿಲ್ಲದ ಟ್ಯಾಂಕ್ ಕಟ್ಟುವುದು. ಪೈಪ್ ಹಾಕುವುದು ಬಹಳ ಬೇಸರದ ವಿಷಯ. ಬೆಳ್ತಂಗಡಿ ತಾಲ್ಲೂಕಿನಲ್ಲಿ ಇದೇ ರೀತಿ ಯೋಜನೆ ಮಾಡಿದ್ದಾರೆ. ಅದಕ್ಕೆ 50 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಆದರೆ ಹೊಳೆಯಲ್ಲಿ ನೀರಿಲ್ಲ. ಗೋಲ್‌ಗುಂಬಸ್ ಹಾಗೆ ಟ್ಯಾಂಕ್ ಕಟ್ಟಿದರೆ ಜನರಿಗೆ ಉತ್ತರ ಕೊಡುವುದು ಕಷ್ಟವಾಗುತ್ತದೆ. ಸರ್ಕಾರಿ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ನಾನು 2-3 ಸಾರಿ ಈ ಬಗ್ಗೆ ಪ್ರಶ್ನೆ ಕೇಳಿದರೂ ಪರಿಹಾರ ಇಲ್ಲ. ಅಧಿಕಾರಿಗಳು ನೀರು ಉಂಟು ಎಂದು ಹೇಳುತ್ತಾರೆ. ಸ್ಥಳೀಯ ಶಾಸಕರು ಹೊಳೆಯಲ್ಲಿ ನೀರು ಇಲ್ಲವೆಂದು ಹೇಳುತ್ತಾರೆ. ಇದರಲ್ಲಿ ಯಾವುದು ಸರಿ? ನಮ್ಮ ಬೆಳ್ತಂಗಡಿ ತಾಲ್ಲೂಕಿನಲ್ಲಿ 50 ಲಕ್ಷ ರೂಪಾಯಿ ಯೋಜನೆ ಮಾಡಿದ್ದರೂ ಮಾರ್ಚ್ ಏಪ್ರಿಲ್‌ನಲ್ಲಿ ನೀರು ಇಲ್ಲ. ಮಳೆಗಾಲದಲ್ಲಿ ಹೊಳೆಯಲ್ಲಿ ನೀರಿದ್ದರೆ ಆಗ ಏನು ಮಾಡುತ್ತೀರಿ?

ಶ್ರೀ ಕೆ.ಜೆ. ಜಾರ್ಜ್ : ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಬಿ.ಎಸ್. ಚವಾಣ್ : ಕುಡಿಯುವ ನೀರಿನ ಯೋಜನೆ ಸಲುವಾಗಿ ಅಧಿಕಾರಿಗಳು ಏನು ಕೆಲಸ ಮಾಡುತ್ತಿದ್ದಾರೆ? ಅವರು ಬಹಳ ಸ್ಲೋ ಆಗಿ ಪ್ರೋಸೆಸ್ ಮಾಡುತ್ತಿದ್ದಾರೆ. ಮಂತ್ರಿಗಳು ಬೇಗನೆ ಮುಗಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಲ್.ಆರ್. ಶಿವರಾಮೇಗೌಡ : ಮಂತ್ರಿಗಳು ಚುರುಕಿದ್ದಾರೆ. ಆದರೆ ಇಲಾಖೆ ಚುರುಕಿಲ್ಲ.

ಶ್ರೀ ಬಿ.ಎಸ್. ಚವಾಣ್ : ಈ ಯೋಜನೆಯನ್ನು 3-4 ವರ್ಷಗಳವರೆಗೆ ಮಾಡಿಕೊಂಡು ಹೋದರೆ ಸಾರ್ಥಕವಾಗುವುದಿಲ್ಲ. ಈ ಯೋಜನೆಯನ್ನು ಬೇಗನೆ ಪೂರ್ಣ ಮಾಡಿ ನೀರು ಕೊಡಿಸುತ್ತೀರಾ?

ಶ್ರೀ ಕೆ.ಜೆ. ಜಾರ್ಜ್ : ಇದರಲ್ಲಿ ಹಲವಾರು ತೊಂದರೆಗಳಿವೆ. ನಗರ ಪ್ರದೇಶಗಳಲ್ಲಿ ಸುಮಾರು 200 ಕೋಟಿ ರೂಪಾಯಿಗಳಿಗೂ ಹೆಚ್ಚಿನ ಕುಡಿಯುವ ನೀರಿನ ಯೋಜನೆಗಳನ್ನು ತೆಗೆದುಕೊಂಡಿದ್ದೇವೆ. ಕಳೆದ ವರ್ಷ 22 ಕೋಟಿ ರೂಪಾಯಿಗಳನ್ನು ವ್ಯವಸ್ಥೆ ಮಾಡಿದ್ದರು. ಮುಖ್ಯ ಮಂತ್ರಿಗಳು ಹತ್ತು ಕೋಟಿ ರೂಪಾಯಿ ಹೆಚ್ಚು ಮಾಡಿ 32 ಕೋಟಿ ರೂಪಾಯಿ ಮಾಡಿದರು. ಮೊದಲೆಲ್ಲ 10-12 ಕೋಟಿ ರೂಪಾಯಿಗಳನ್ನು ವರ್ಷಕ್ಕೆ ಇಡುತ್ತಿದ್ದರು. ನಮ್ಮ ಮುಖ್ಯ ಮಂತ್ರಿಗಳು ಬರುವ ವರ್ಷ 50 ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ಒದಗಿಸಿದ್ದಾರೆ. ಈಗ ಯಡ್ಡು ಬೇಕಾದಷ್ಟು ಇಟ್ಟುಕೊಂಡಿದ್ದೇವೆ. ಆದರಿಂದ ಆದಷ್ಟು ಬೇಗ ಎಲ್ಲಾ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇನ್ನೊಂದು ತೊಂದರೆ ಏನು ಬರುತ್ತದೆಂದರೆ. ಮುನಿಸಿಪಾಲಿಟಿಯವರು ತಮ್ಮ ಭಾಗದ ಹಣವನ್ನು ಕೊಡಬೇಕಾಗುತ್ತದೆ. ಅದನ್ನು ಎಷ್ಟೋ ಮುನಿಸಿಪಾಲಿಟಿಯವರು ಕೊಡುತ್ತಿಲ್ಲ. ಅವರು ಕೊಡದಿದ್ದರೆ ಕೆಲಸ ನಿಧಾನವಾಗುತ್ತದೆ. ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಯಾವ ಯಾವ ಮುನಿಸಿಪಾಲಿಟಿಗಳು ಯಡ್ಡು ಕೊಡಬೇಕು ಅವು ಆದಷ್ಟು ಬೇಗ ಕೊಟ್ಟರೆ ಎಲ್‌ಐಸಿ ಯಿಂದ, ಹುಡ್ಕೋದಿಂದ ಸಾಲ ತೆಗೆದು ಕುಡಿಯುವ ನೀರಿನ ಯೋಜನೆಗಳನ್ನು ಪೂರ್ತಿಗೊಳಿಸುವ ಕೆಲಸ ಮಾಡಬಹುದು.

ಶ್ರೀ ಎಂ. ಮಹಾದೇವ್ : ಮುನಿಸಿಪಾಲಿಟಿ ನಿಧಿಯಿಂದ ಏನು ಹಣ ತುಂಬಬೇಕು ಆ ಹಣವನ್ನು ಕೊಟ್ಟರೆ ಕೆಲಸ ಜಲ್ದಿ ಮಾಡುವುದಕ್ಕೆ ಸಾಧ್ಯ ಎಂದು ಹೇಳಿದ್ದಾರೆ. ರಾಜ್ಯದಲ್ಲಿ ಎಷ್ಟೋ ಮುನಿಸಿಪಾಲಿಟಿಗಳು ಲಾಸ್‌ನಲ್ಲಿ ನಡೆಯುತ್ತಿವೆ. ವಾಟರ್ ಬಿಲ್, ಲೈಟ್ ಚಾರ್ಜ್ ಕಟ್ಟುವುದಕ್ಕಾಗುತ್ತಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಒಂದೊಂದು ಮುನಿಸಿಪಾಲಿಟಿಯ ಕರೆಂಟ್ ಚಾರ್ಜ್ ಭರ್ತಿ ಮಾಡಿ ಫ್ರೀ ಕನೆಕ್ಷನ್ ತೆಗೆದುಕೊಂಡಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ಮತ್ತು ಮುನಿಸಿಪಾಲಿಟಿಯವರು ಹಣ ಕೊಡಲು ನಿಶ್ಚಯ್ತರಾಗಿದ್ದಂಥ ಸಂದರ್ಭದಲ್ಲಿ ಸರ್ಕಾರವೇ ಮುಂದೆ ಬಂದು ಸಹಾಯ ಮಾಡಿ ಆ ಹಣವನ್ನು ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತದೆಯೇ?

ಶ್ರೀ ಕೆ.ಜೆ. ಜಾರ್ಜ್ : ಈಗಾಗಲೇ ಸರ್ಕಾರ ಕ್ರಮ ತೆಗೆದುಕೊಂಡಿದೆ. ಆರ್ಡಿನೆನ್ಸ್ ಬದಲು ಎಂಟ್ರಿ ಟ್ಯಾಕ್ಸ್ ಹಾಕಬೇಕೆಂದು ಈ ಹಿಂದೆಯೇ ಪಾಸ್ ಆದ ಮಸೂದೆಗೆ ಪ್ರೆಸಿಡೆಂಟ್ ಅಪ್ರೂವಲ್ ಆಗಿದೆ. ಇದರಿಂದ ಹೆಚ್ಚಿನ ಹಣ ಸಹಾಯ ಮುನಿಸಿಪಾಲಿಟಿಗೆ ಬರುತ್ತದೆ. ಆ ಹಣ ಸಹಾಯವನ್ನು ಉಪಯೋಗಿಸಿಕೊಂಡು ಕುಡಿಯುವ ನೀರಿನ ಯೋಜನೆಗಳನ್ನು ಆದಷ್ಟು ಬೇಗ ಪೂರ್ತಿಗೊಳಿಸುವ ಕೆಲಸವನ್ನು ಸರ್ಕಾರ ಮಾಡುತ್ತದೆ.

ರಾಜ್ಯ ಸೇವೆಯಲ್ಲಿನ ಭಾರತ ಸರ್ಕಾರದ ಅಧಿಕಾರಿಗಳು

1504. ಶ್ರೀ ಹೆಚ್. ವಿಶ್ವನಾಥ್ (ಕೆ.ಆರ್. ನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತ ಸರ್ಕಾರದ ಯಾವ ಯಾವ ಇಲಾಖೆಯ ಅಧಿಕಾರಿಗಳು ರಾಜ್ಯ ಸರ್ಕಾರದ ಸೇವೆಯಲ್ಲಿ ಇರುವರು ಹಾಗೂ ಅವರ ಸಂಖ್ಯೆ ಎಷ್ಟು?